## ಬಾಕು ಹಾಕ್ರೀ...!

ರಾತ್ರಿಯ ಅಡುಗೆಯ ಸಿದ್ಧತೆಯಲ್ಲಿದ್ದ ಪಮ್ಮಿ, ತನ್ನ ಪತಿ ಪರಮೇಶಿ ಮನೆಯ ಕಾಂಪೌಂಡ್ ಒಳಗೆ ನಿಂತುಕೊಂಡೇ ಅದ್ಯಾರೊಂದಿಗೋ ಸುಮಾರು ಹೊತ್ತಿನಿಂದ ಮಾತನಾಡುತ್ತಿರುವುದನ್ನು ಗಮನಿಸಿದಳು.

ತುಸು ಬೇಸರದಿಂದಲೇ ಆಚೆಗೆ ಬಂದ ಪಮ್ಮಿ ತನ್ನ ಗಂಡನಿಗೆ, 'ರ್ರೀ...ಇಷ್ಟೊತ್ತಿಗೆ ಹಂಗೇ ನಿಂತ್ಕೊಂಡು ಮಾತಾಡ್ಲಾಕತ್ತೀರಲ್ಲ ಅವ್ರನ್ ಒಳಗ್ ಕರೆದು ಬಾಕು ಹಾಕಬಾರದಾ...' ಎಂದು ಹೇಳುತ್ತಾ ಅಪರಿಚಿತನ ಕಡೆಗೆ ತಿರುಗಿ ನೋಡುವಷ್ಟರಲ್ಲಿ ಆತ ಮಂಗ ಮಾಯವಾಗಿದ್ದ!

ಕಾರಣ ಇಷ್ಟೇ ಪಮ್ಮಿಯ ಭಾಷೆಯಲ್ಲಿ 'ಬಾಕು' ಎಂದರೆ ಕೂರುವ ಬೆಂಚ್ ಆಗಿದ್ದರೆ, ಆಪರಿಚಿತನ ಭಾಷೆಯಲ್ಲಿ ಅದು ಹರಿತವಾದ ಚೂರಿ ಆಗಿತ್ತು.



**ಅರವಿಂದ ಜಿ. ಜೋಷಿ**

## ರಾವಣನ ತಲೆಗಳು ವೃತ್ತಾಕಾರದಲ್ಲಿದ್ದವೆ?

ಪೀಳಿಗೆಯಿಂದ ಪೀಳಿಗೆಗೆ ಮಕ್ಕಳು ತೀಕ್ಷ್ಣಮತಿಗಳಾಗುತ್ತಿರುವುದು ಅನೇಕರ ಗಮನಕ್ಕೆ ಬಂದಿರಬಹುದು. ಕೆಲವು ಮಕ್ಕಳಂತೂ ಎಲ್ಲವನ್ನೂ ತರ್ಕಬದ್ಧವಾಗಿ ಪ್ರಶ್ನಿಸುತ್ತಾರೆ. ಕೆಲವೊಮ್ಮೆ ಅವರು ಕೇಳುವ ಪ್ರಶ್ನೆಗಳು ಪೋಷಕರನ್ನು ಮೂಕವಿಸ್ಮಿತರನ್ನಾಗಿಸುತ್ತವೆ; ಉತ್ತರಿಸಲು ತಿಣುಕುವಂತೆ ಮಾಡುತ್ತವೆ. ಅಂಥದ್ದೊಂದು ಘಟನೆ ನಮ್ಮನೆಯಲ್ಲೂ ನಡೆದಿತ್ತು.

ನಾಲ್ಕು ವರ್ಷದ ಮೊಮ್ಮಗಳಿಗೆ ಅವಳ ಅಜ್ಜಿ ಪೌರಾಣಿಕ ಕಥೆಗಳನ್ನು ಹೇಳುತ್ತಿದ್ದರು. ಬ್ರಹ್ಮನಿಗೆ ನಾಲ್ಕು ತಲೆಗಳು ಇರುವುದಾಗಿ ತಿಳಿಸಿದಾಗ ಅವಳು ಅವು ಹೇಗಿವೆ ಎಂದು ಪ್ರಶ್ನಿಸಿದಳು. ಒಂದೊಂದು ತಲೆ ಒಂದೊಂದು ದಿಕ್ಕಿಗೆ ಇದೆ ಎಂದು ಅಜ್ಜಿ ಉತ್ತರಿಸಿದರು. ಮುಂದುವರೆದು, 'ರಾವಣನಿಗೆ ಹತ್ತು ತಲೆಗಳಿದ್ದವು' ಎಂದರು.

'ಅವು ಸಾಲಾಗಿದ್ದವೋ ಅಥವಾ ವೃತ್ತಾಕಾರದಲ್ಲಿದ್ದವೋ?' ಎಂಬ ಪ್ರಶ್ನೆ



ಕ್ಷಣಾರ್ಧದಲ್ಲಿ ಬಾಣದಂತೆ ಬಂದೆರಗಿತು ಮೊಮ್ಮಗಳಿಂದ. ಮೊಮ್ಮಗಳ ಪ್ರಶ್ನೆಯನ್ನು ಅರಗಿಸಿಕೊಂಡು ಉತ್ತರಿಸಲು ಅಜ್ಜಿಗೆ ಸ್ವಲ್ಪ ಸಮಯ ಬೇಕಾಯಿತು.

**ಮಂಜುನಾಥ ಡಿ.ಎಸ್.**